ಅ)ಉದ್ಯೋಗ ಭರವಸೆ ಯೋಜನೆ ಈಗ ಪ್ರಸ್ತುತ ಜಾರಿಯಲ್ಲಿರುವುದಿಲ್ಲ. ಸದರಿ ಯೋಜನೆಯು ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಲ್ಲಿ ವಿಲೀನಗೊಂಡಿರುತ್ತದೆ. ಪ್ರಸ್ತಾವ ಮಾಡಿರುವ ವಿಷಯವು ಉದ್ಯೋಗ ಭರವಸೆ ಯೋಜನೆಗೆ ಸಂಬಂಧಪಡುವುದಿಲ್ಲ. ಮುಂಡರಗಿ ತಾಲ್ಲೂಕಿನ ಡೋಣಿ ಹಾಗೂ ಬಿದರಳ್ಳಿಗ್ರಾಮ ಪಂಚಾಯತ್‌ಗಳಲ್ಲಿ ಬರ ಪರಿಹಾರ ಮತ್ತು ಜಲರಕ್ಷಣೆ ಯೋಜನೆಗಳಡಿ ಬಿಡುಗಡೆಯಾದ ಆಹಾರಧಾನ್ಯದಲ್ಲಿ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ದುರುಪಯೋಗದ ಪ್ರಕರಣದಲ್ಲಿ, ಡೋಣಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಶ್ರೀ.ಎಸ್. ಎಲ್. ರೂಪನವರ ಹಾಗೂ ಬಿದರಳ್ಳಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಶ್ರೀ. ಎಸ್. ಕೆ. ಬಜೆಮನವರ ಇವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. ಸದರಿಯವರ ಮೇಲೆ ದೋಷಾರೋಪಣ ಪಟ್ಟಿ ಸಿದ್ಧಪಡಿಸಿ ಇಲಾಖೆ ವಿಚಾರಣೆಯನ್ನು ಪ್ರಾರಂಭಿಸಲಾಗುವುದು

ಇ) ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಾಮಗಾರಿ, ದಾಖಿಲಾತಿ ಪರಿಶೀಲನೆಗಾಗಿ ಹಾಗೂ ತಪಾಸಣೆಗಾಗಿ ಒಂದು ತಪಾಸಣಾ ತಂಡವನ್ನು ರಚಿಸಿದ್ದು, ಸದರಿ ತಪಾಸಣಾ ತಂಡದಿಂದ ಸಮಗ್ರ ವರದಿ ಬಂದ ನಂತರ, ಪ್ರಕರಣದಲ್ಲಿ ಭಾಗಿಯಾದವರ ವಿವರ ಪಡೆಯಲಾಗುವುದು.

ಈ) ಸಮಗ್ರ ತನಿಖಾ ವರದಿ ಬಂದ ನಂತರ ಪ್ರಕರಣಕ್ಕೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

5056 (5736) ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಎಷ್ಟುಕೊಠಡಿಗಳು ಅತ್ಯಾವಶ್ಯಕ ಎಂದು ಗುರುತಿಸಲಾಗಿದೆ :

ಆ) ಅವುಗಳಲ್ಲಿ ಎಷ್ಟು ಕೊಠಡಿಗಳನ್ನು ನಿರ್ಮಿಸಲು ಕಳೆದ ಎರಡು ವರ್ಷಗಳಲ್ಲಿ ಸರಕಾರ ವ್ಯವಸ್ಥೆ ಮಾಡಿದೆ; ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು;

ಇ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯ ಎಷ್ಟು ಪ್ರೌಢಶಾಲೆಗಳಿಗೆ ಕೊಠಡಿಗಳ ಅವಶ್ಯಕತೆಯಿದೆ ಹಾಗೂ ಅವುಗಳನ್ನು ಯಾವಾಗ ನಿರ್ಮಿಸಿ ಕೊಡಲಾಗುವುದು;

ಈ) ಪ್ರೌಢಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಿಕೊಡುವ ಯೋಜನೆಯು ಪೂರ್ಣಗೊಂಡಿದೆಯೇ;

ಉ) ಇಲ್ಲವಾದಲ್ಲಿ, ಆ ಕುರಿತಾದ ವಿವರಗಳೇನು;

ಊ) ಬೆಳ್ತಂಗಡಿ ತಾಲ್ಲೂಕಿನ ಪ್ರೌಢಶಾಲೆಗಳಿಗೆ 2003–04ನೇ ಸಾಲಿನಲ್ಲಿ ಮಂಜೂರಾದ ಕಂಪ್ಯೂಟರ್ ಒದಗಿಸುವಿಕೆಯ ವಿವರಗಳೇನು;

ಋ) 2004–05ನೇ ಸಾಲಿಗೆ ತಾಲ್ಲೂಕಿಗೆ ಎಷ್ಟು ಕಂಪ್ಯೂಟರ್‌ಗಳನ್ನು ಒದಗಿಸಿಕೊಡಲು ಸರಕಾರ ಕ್ರಮ ಜರುಗಿಸಲಾಗುವುದು?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ) ರಾಜ್ಯದಲ್ಲಿ ಕೊರತೆ ಇರುವ ಕೊಠಡಿಗಳ ಹಾಗೂ ಶಾಲೆಗಳ ಸಂಖ್ಯೆ

	ಪ್ರಾಥಮಿಕ	ಪ್ರೌಢ
ಕೊಠಡಿಗಳ ಕೊರತೆ ಇರುವ ಶಾಲೆಗಳ ಸಂಖ್ಯೆ	12054	1664
ಕೊರತೆ ಇರುವ ಕೊಠಡಿಗಳ ಸಂಖ್ಯೆ	21902	5684

ಆ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ನಿರ್ಮಿಸಲು ಕ್ರಮ ಕೈಗೊಂಡಿರುವ ಕೊಠಡಿಗಳ ಸಂಖ್ಯೆ (ಪ್ರಾಥಮಿಕ)

ಕ್ರ. ಸಂ.	ಕಾರ್ಯಕ್ರಮ	ಕೊಠಡಿಗಳ ಸಂಖ್ಯೆ 03–04	04–05	ಒಟ್ಟು
01	R.I.DF-VII(02-03ರಿಂದ 05–06 ರವರೆಗೆ)	–	–	4895
02	ಪಿ.ಎಂ.ಜಿ.ವೈ	167	–	167
03	IIನೇ ಹಣಕಾಸು	0	781	781
04	ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೊಠಡಿ ನಿರ್ಮಾಣ	100	33	133
05	ಶಾಸಕರಕೋರಿಕೆಯಮೇರೆಗೆ	0	40	40
06	ಸರ್ವ ಶಿಕ್ಷಾ ಅಭಿಯಾನ	3039	3885	6924
ಒಟ್ಟು	(R.I.D.F ಹೊರತುಪಡಿಸಿ)	3306	4739	12940

ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ 2005–06ನೇ ಸಾಲಿನಿಂದ ಆರ್.ಐ.ಡಿ.ಎಫ್. ಯೋಜನೆಯಡಿ 2977 ಕೊಠಡಿಗಳನ್ನು ರೂ. 57.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುದಾನ ಬಿಡುಗಡೆ ಮಾಡಲಾಗಿದೆ.

(ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.)

ಇ) 25 ಪ್ರೌಢಶಾಲೆಗಳಿಗೆ 65 ಕೊಠಡಿಗಳ ಅವಶ್ಯಕತೆ ಇರುತ್ತದೆ. ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯ ಮೂರು ಪ್ರೌಢ ಶಾಲೆಗಳಲ್ಲಿ 4 ಕೊಠಡಿಗಳ ನಿರ್ಮಾಣಕ್ಕಾಗಿ ಅನುಮೋದನೆ ನೀಡಿದೆ. ಅನುದಾನದ ಲಭ್ಯತೆಯನ್ನು ಆಧರಿಸಿ ಹಂತಹಂತವಾಗಿ ಕೊಠಡಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಇಲ್ಲ.

ಉ) ರಾಜ್ಯದ 1238 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಅನುಷ್ಠಾನಗೊಳಿಸಲಾಗಿದೆ. ಉಳಿದ 1781 ಸರ್ಕಾರಿ ಪ್ರೌಢ ಶಾಲೆಗಳಿಗೆ ಎಕಂಪ್ಯೂಟರ್ ಶಿಕ್ಷಣ ಅನುಷ್ಠಾನಗೊಳಿಸುವ ಐ.ಸಿ.ಟಿ ಯೋಜನೆಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಊ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಾಹಿತಿ ಸಿಂಧು ಯೋಜನೆಯಡಿ 5, ಪರಿಷ್ಕೃತ ಕ್ಲಾಸ್ ಯೋಜನೆಯಡಿ 1 ಮತ್ತು ಹನ್ನೊಂದನೇ ಹಣಕಾಸು ಯೋಜನೆಯಡಿ 1 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಈಗಾಗಲೇ ಜಾರಿಗೊಳಿಸಲಾಗಿದೆ.

ಋ) 2004–05 ಆರ್ಥಿಕ ವರ್ಷ ಮುಗಿದಿರುವುದರಿಂದ ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ.ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ :5736 ಕ್ಕೆ ಅನುಬಂಧ

ಕಳೆದ ಎರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಾಣ ಮಾಡಿದ ಕೊಠಡಿಗಳ ತಾಲ್ಲೂಕುವಾರು ವಿವರ :

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಕಳೆದ ಎರಡು ವರ್ಷಗಳಲ್ಲಿ ನಿರ್ಮಾಣಗೊಂಡ ಕೊಠಡಿಗಳ ಸಂಖ್ಯೆ		
		2003–04	2004–05	ಒಟ್ಟು
01	ಬಂಟ್ವಾಳ	24	44	68
02	ಬೆಳ್ತಂಗಡಿ	18	31	49
03	ಮಂಗಳೂರು ನಗರ	04	08	12
04	ಮಂಗಳೂರು ತಾಲ್ಲೂಕು	12	43	55
05	ಮೂಡುಬಿದ್ರೆ	07	14	21
06	ಪುತ್ತೂರು	11	28	39
07	ಸೂಳ್ಯ	07	21	28
	ಒಟ್ಟು	**83**	**186**	**279**

5057 (5997) ಶ್ರೀ ಪ್ರಭಾಕರ ಬಂಗೇರ.ಕೆ. (ಬೆಳ್ತಂಗಡಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಶೈಕ್ಷಣಿಕ ಸಾಲಿನಲ್ಲಿ ಹೊಸ ಪಾಲಿಟೆಕ್ನಿಕ್ ಶಿಕ್ಷಣಾಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದ್ದಲ್ಲಿ, ವಿವರಗಳೇನು;

ಆ) ಹಿಂದುಳಿದ ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಕೂಡಿದ ಬೆಳ್ತಂಗಡಿ ತಾಲ್ಲೂಕಿಗೆ ಸರ್ಕಾರಿ ಪಾಲಿಟೆಕ್ನಿಕ್ ಶಿಕ್ಷಣಾಲಯದ ವ್ಯವಸ್ಥೆ ಬೇಕೆಂಬುದನ್ನು ಸರ್ಕಾರ ಗಮನಿಸಿಲ್ಲವೇ;

ಇ) ಗ್ರಾಮಾಂತರದ ಹಾಗೂ ಬಡಮಕ್ಕಳ ತಾಂತ್ರಿಕ ಶಿಕ್ಷಣಕ್ಕೆ ಅನುಕೂಲವಾಗುವಂತೆ ಬೆಳ್ತಂಗಡಿ ತಾಲ್ಲೂಕಿಗೆ ಒಂದು ಸರ್ಕಾರಿ ಪಾಲಿಟೆಕ್ನಿಕ್ ಶಿಕ್ಷಣಾಲಯವನ್ನು ಮಂಜೂರು ಮಾಡಿ ಕೂಡಲೇ ಪ್ರಾರಂಭಿಸಲು ಸರ್ಕಾರದ ಕ್ರಮಗಳೇನು;

ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳ ಪಾಲಿಟೆಕ್ನಿಕ್ ಶಿಕ್ಷಣಕ್ಕಾಗಿ ಬೇಡಿಕೆ ಇದ್ದು ಸರ್ಕಾರ ಈ ಕುರಿತು ಸಕಾಲಿಕ ಕ್ರಮಗಳನ್ನು ಜರುಗಿಸುವುದೆ?

ಉನ್ನತ ಶಿಕ್ಷಣ ಸಚಿವರು. :

ಅ) ಈ ಶೈಕ್ಷಣಿಕ ಸಾಲಿನಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಆ) ಗಮನಿಸಲಾಗಿದೆ.

ಇ) ಆಯವ್ಯಯದಲ್ಲಿನ ಹಣದ ಲಭ್ಯತೆ ಆಧರಿಸಿ ಪರಿಶೀಲಿಸಲಾಗುವುದು.